**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂ ಃ <u>1</u>**

**ಸಿಡಬ್ಲ್ಯೂ ಃ <u>1</u>**

ಸಾಕ್ಷಿದಾರರ ಹೆಸರು ಃ ಪ್ರಕಾಶ ಯರಟೋಟಿ

ತಂದೆ ಹೆಸರು ಃ ರೋಶಯ್ಯ

ವಯಸ್ಸು ಃ 43 ವರ್ಷ

ಉದ್ಯೋಗ ಃ ವೆಲ್ಡಿಂಗ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಶೇಷಂ ಮ್ಯಾಥ್ಯೂ ಪರಿಚಯವಿದ್ದರು. 2021, 9 ನೇ ತಿಂಗಳು ಒಂದು ದಿನ ಮಃ 2 ರಿಂದ 2.15 ಗಂಟೆ ಸಮಯದಲ್ಲಿ ಅಪಘಾತ ವಾಗಿದೆ ಎಂದು ಗೊತ್ತಾಗಿ ನಾನು ಹುಬ್ಬಳ್ಳಿ-ಗದಗ ರೋಡಿನ ಅಂಡರ ಬ್ರಿಜ್ ಬಳಿ ಹೋಗಿ ನೋಡಿದಾಗ ಅಲ್ಲಿ ಶೇಷಂ ಮ್ಯಾಥ್ಯೂ ರವರ ಎಡಗಾಲಿಗೆ ತೀವ್ರ ಗಾಯವಾಗಿತ್ತು. ರಕ್ತ ಬರುತ್ತಿತ್ತು. ಅಲ್ಲಿಗೆ ಬಂದ ಪೋಲಿಸರು ಗಾಯಾಳುವನ್ನು ಕಿಮ್ಸ ಆಸ್ಪತ್ರೆಗೆ ರವಾನಿಸಿರುತ್ತಾರೆ. ನಾನು ಅಲ್ಲಿದ್ದ ಸಾರ್ವಜನಿಕರನ್ನು ವಿಚಾರಿಸಿದಾಗ ಗಾಯಾಳು ಶೇಷಂ ಮ್ಯಾಥ್ಯೂ ತನ್ನ ಬೈಕಿನಲ್ಲಿ ಪಿಂಟೋ ಸರ್ಕಲ ಕಡೆಯಿಂದ ಸಿ ಬಿ ಟಿ ಕಡೆಗೆ ಹೋಗುತ್ತಿದ್ದಾಗ, ಒಂದು ಟಿಪ್ಪರ ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆಂದು ತಿಳಿದುಬಂದಿದೆ. ನಾನು ಸ್ಥಳದಲ್ಲಿ ಅಪಘಾತ ಕ್ಕೆ ಒಳಗಾದ ಹಾಗೂ ಅಪಘಾತ ಪಡಿಸಿದ ವಾಹನಗಳನ್ನು ನೋಡಿದ್ದೇನೆ. ಆರೋಪಿಯನ್ನು ಪೋಲಿಸರು ಸ್ಥಳದಲ್ಲಿ ತೋರಿಸಿದರು. ಆತನ ಹೆಸರು ಪೋಲಿಸ ಠಾಣೆಯಲ್ಲಿ ಮಹಬೂಬ ನಾಗನೂರ ಎಂದು ತಿಳಿದುಬಂದಿತು. ಅದೇ ದಿನ ಸಂಜೆಃ 4.30 ಗಂಟೆಗೆ ಪೋಲಿಸ ಠಾಣೆಗೆ ದೂರು ನೀಡಿದ್ದೇನೆ. ದೂರಿನಲ್ಲಿರುವ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.1-ಎ ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ ಗಾಯಾಳು ಮೃತಪಟ್ಟಿದ್ದಾನೆ. ವಿಷಯ ಪೋಲಿಸರಿಗೆ ತಿಳಿಸಿದ್ದೇವೆ. ಸಾಕ್ಷಿಯೂ ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಪೋಟೋವನ್ನು ನೋಡಿ ಗುರುತಿಸಿದ್ದಾರೆ. ಪೊಟೋವನ್ನು ನಿಪಿ.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ ವಕೀಲರಿಂದಃ**

ಸಿ ಬಿ ಟಿ ಕಡೆಗೆ ಹೋಗಬೇಕಾದರೆ ಬಲಬದಿಗೆ ತಿರುಗಬೇಕು ಅಂದರೆ ಸರಿ. ಶೇಷಂ ಮ್ಯಾಥ್ಯೂ 10-15 ಫೂಟು ಮುಂದೆ ಹೋಗಿದ್ದು ನೆನಪಿಲ್ಲ. ಗದಗಗೆ ಹೋಗಬೇಕಾದರೆ ಎಡಬದಿಗೆ ಹೋಗಬೇಕು. ಆ ಕಡಯಿಂದ ಬರುವವರು ಬಲಬದಿಗೆ ಬರಬೇಕು ಅಂದರೆ ಸರಿ. ಬಲಬದಿಗೆ ಬರುವವರು ಎಡಬದಿಗೆ ಹೋಗಬೇಕು. ಶೇಷಂ ಮ್ಯಾಥ್ಯೂ ಈತ ಬಲಬದಿಗೆ ತಿರುಗಬೇಕೆಂದರೆ ಸರಿ. ಅಲ್ಲಿ ರೋಡ 110 ಅಡಿ ಅಗಲವಿದೆ ಅಂದರೆ ಸರಿ. ಸಿ ಬಿ ಟಿ ಗೆ ಹೋಗಬೇಕಾದರೆ ಬಲಬದಿಗೆ ಹೋಗಬೇಕು ಅಂದರೆ ಸರಿ. ಟಿಪ್ಪರ ಎಡಗಡೆಗೆಹೊರಟಿದೆ ಅಂದರೆ ಸರಿ. ಪಿಂಟೋ ಸರ್ಕಲ ಮುಂಚೆ ಸಿಗ್ನಲ್ ಇವೆ ಅಂದರೆ ಸರಿ. ಕಡಿಮೆ ಅಂದರೆ, 2 ನಿಮಿಷದಲ್ಲಿ 40-50 ವಾಹನಗಳು ನಿಲ್ಲುತ್ತವೆ ಅಂದರೆ ಸರಿ. ಅಲ್ಲಿ 10 ಕಿಮೀ ವೇಗವಾಗಿ ಹೋಗುವುದಿಲ್ಲ ಅಂದರೆ ಸರಿಯಲ್ಲ. 20-30 ಕಿಮೀ ಹೋಗಬಹುದು. ಆ ದಿನ ಮ್ಯಾಥ್ಯೂ ಮದ್ಯಪಾನ ಮಾಡಿದ್ದನು ಅಂದರೆ ಸರಿಯಲ್ಲ. ಆ ದಿನ ಮ್ಯಾಥ್ಯೂ ಮದ್ಯಸೇವನೆ ಮಾಡಿ ಗಾಡಿ ನಡೆಸುತ್ತಿದ್ದನು ಎಂದು ಪೋಲಿಸರು ವರದಿ ಸಲ್ಲಿಸಿದ್ದಾರೆ ಅಂದರೆ ಗೊತ್ತಿಲ್ಲ. ಮ್ಯಾಥ್ಯೂನನ್ನು 3 ನೇ ಆರೋಪಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಮ್ಯಾಥ್ಯೂ ಆ ದಿನ ಕುಡಿದು ಅಲ್ಲಿ ತೆಗ್ಗಿನಲ್ಲಿ ಬಿದ್ದಿದ್ದು ನನಗೆ ಸ್ವಂತಕ್ಕೆ ಗೊತ್ತಿಲ್ಲ. ತೆಗ್ಗಿನಲ್ಲಿ ಬಿದ್ದ ಬಗ್ಗೆ ವಿಚಾರ ಮಾಡಿಲ್ಲ. ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ನಾನು ಆ ದಿನ ಊಟಕ್ಕೆ 2 ಗಂಟೆಗೆ ಹೊರಟಿದ್ದೆನು. ನಾನು ಅನುಮಾನದಿಂದ ಹೋಗಿ ನೋಡಿದಾಗ ಅಪಘಾತ ವಾಗಿದ್ದು ಗೊತ್ತಾಯಿತು. ನನಗೆ ಯಾರು ಫೋನ್ ಮಾಡಿಲ್ಲ. ಫೋನ್ ಮಾಡಿದ ವಿಷಯ ಪೋಲಿಸರಿಗೆ ಹೇಳಿಲ್ಲ ಹಾಗೂ ದೂರಿನಲ್ಲಿ ಹೇಳಿಲ್ಲ. ದೂರಿನಲ್ಲಿರುವ ವಿಷಯ ಪೋಲಿಸರಿಗೆ ಹೇಳಿಲ್ಲ. ಟೈಪ ಮಾಡಿದ್ದಕ್ಕೆ ಸಹಿ ಮಾಡಿದ್ದೇನೆ ಅಂದರೆ ಸರಿ. ಪೋಲಿಸರು ಗಾಡಿಯನ್ನು ಅಳವಡಿಸಿದ್ದಾರೆ ಅಂದರೆ ಗೊತ್ತಿಲ್ಲ. ಮೃತರಿಗೆ ಪರಿಹಾರ ಸಿಗಲು ಪೋಲಿಸರು ಗಾಡಿ ಅಳವಡಿಸಿದ್ದಾರೆ ಅಂದರೆ ಗೊತ್ತಿಲ್ಲ. ಗಾಡಿ ಹಾಗೂ ಆರೋಪಿಯನ್ನು ಪೋಲಿಸರು ತೋರಿಸಿದ್ದಾರೆ ಅಂದರೆ ಸರಿ. ಪೋಲಿಸರು ಹೇಳಿದ ಹಾಗೆ ನಾನು ಕೇಳಿದ್ದೇನೆ. ನಾನು ಒಂದೆ ಬಾರಿಗೆ ಪೋಲಿಸ ಠಾಣೆಗೆ ಹೋಗಿದ್ದೇನೆ. ನನ್ನ ಗೆಳೆಯನಿಗೆ ಸಹಾಯವಾಗಲು ಸುಳ್ಳು ದೂರು ನೀಡಿದ್ದೇನೆ. ಮ್ಯಾಥ್ಯೂ ತಾನೇ ಕುಡಿದು ಗಾಯಪಡಿಸಿಕೊಂಡಿದ್ದಾನೆ ಅಂದರೆ ಸರಿಯಲ್ಲ. ಅಪಘಾತ ಕ್ಕೂ ಹಾಗೂ ಆರೋಪಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 22-22** **ಪಿಡಬ್ಲ್ಯೂಃ** **2**

**ಸಿಡಬ್ಲ್ಯೂಃ** **2**

ಸಾಕ್ಷಿದಾರರ ಹೆಸರು ಃ ರಮೇಶ ತಲಾರಿ

ತಂದೆ ಹೆಸರು ಃ ಗುಣಶೇಖರ

ವಯಸ್ಸು ಃ 35 ವರ್ಷ

ಉದ್ಯೋಗ ಃ ಕೂಲಿ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸುಮಾರು 4 ವರ್ಷಗಳ ಹಿಂದೆ 9 ನೇ ತಿಂಗಳು 28 ನೇ ತಾರೀಖು ಸಂಜೆಃ 5.30 ರಿಂದ 6 ಗಂಟೆ ಅವಧಿಯಲ್ಲಿ ನಾನು ನನ್ನ ಕೆಲಸಕ್ಕೆ ಹೋಗುತ್ತಿದ್ದಾಗ ರೇಲ್ವೆ ಅಂಡರ ಬ್ರಿಜ್ ಬಳಿ ಕರೆದು ಆ ಕಾಲಕ್ಕೆ ಚಾಸಾ-1 ರವರು ಇದ್ದು, ಅಲ್ಲಿ ಅಪಘಾತ ಕುರಿತು ಅಲ್ಲಿ ಪಂಚನಾಮೆ ಕ್ರಮಜರುಗಿಸಿ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಗೆ ಪಂಚನಾಮೆ ತೋರಿಸಲಾಗಿ, ಪಂಚನಾಮೆಯನ್ನು ನಿಪಿ.3 ಎಂದು, ಸಾಕ್ಷಿ ಸಹಿ ನಿಪಿ.3-ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋಗಳನ್ನು ನಿಪಿ.4 ಹಾಗೂ 5 ಎಂದು ಗುರುತಿಸಲಾಯಿತು. ಮರುದಿನ ಪೋಲಿಸರು ಪೋಲಿಸ ಠಾಣೆಗೆ ಕರೆಸಿ ಬೆಃ 11 ರಿಂದ 12 ಗಂಟೆಗೆ ಅಪಘಾತ ಪಡಿಸಿದ ಹಾಗೂ ಅಪಘಾತ ಕ್ಕೊಳಗಾದ ಒಂದು ಲಾರಿ ಹಾಗೂ ಬೈಕನ್ನು ಪೋಲಿಸರು ಅಮಾನತ್ತಪಡಿಸಿಕೊಂಡು ಪಂಚನಾಮೆಗೆ ನನ್ನ ಸಹಿ ಪಡೆದಿದ್ದಾರೆ. ಸದರಿ ಪಂಚನಾಮೆ ನಿಪಿ.6 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.6-ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವಿ ಬಿ, ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ಸ್ಥಳ ಪಂಚನಾಮೆ ಹಾಗೂ ಜಪ್ತ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಸಹಿ ಮಾಡು ಅಂತಾ ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. ಫೋಟೋ ಯಾತಕ್ಕೆ ತೆಗೆದುಕೊಂಡರೆಂದು ಗೊತ್ತಿಲ್ಲ.

ನನ್ನ ಮುಂದೆ ನಕಾಶೆ ತಯಾರು ಮಾಡಿಲ್ಲ. ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಪೋಲಿಸರು ಸಾಕ್ಷಿ ನುಡಿ ಅಂತಾ ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.